ಬೈರೇಗೌಡರು ನೋಡುವಾಗ ಒಂದು ಕನ್ನಡಕ ಮತ್ತು ಓದುವಾಗ ಒಂದು ಕನ್ನಡಕ ಹೀಗೆ ಎರಡು ಕನ್ನಡಕಗಳನ್ನು ಉಪಯೋಗಿಸುತ್ತಾರೆ. ಹಾಗೆ ಇಲ್ಲಿರುವಾಗ ಒಂದು ತರಹ ಕನ್ನಡಕ ಮತ್ತು ಅಲ್ಲಿರುವಾಗ ಒಂದು ತರಹ ಕನ್ನಡಕ....

ಶ್ರೀ ಬೈರೇಗೌಡ: ಅಲ್ಲಿ ಇದ್ದಾಗಲೂ ಎರಡು ಕನ್ನಡಕಗಳು ಇದ್ದವು. ಇಲ್ಲಿ ಇರುವಾಗಲೂ ಎರಡು ಕನ್ನಡಕಗಳು ಇವೆ.

ಶ್ರೀ ವಾಟಾಳ್ ನಾಗರಾಜ್: ತಾವು ಹಿಂದಿನ ಕಡತ ತರಿಸಿ ನೋಡಿ. ಸ್ವಲ್ಪ ಹೆಚ್ಚು ಕಡಿಮೆ ಒಂದು ದಿನದಲ್ಲಿ ಕನಿಷ್ಟ ಒಂದು ನೂರು ಸಾರಿ ಸರ್ಕಾರದ ವಿರುದ್ಧ ಹೇಳುತ್ತಿದ್ದರು. ಅಂದರೆ ಗರಿಷ್ಟ ಎಷ್ಟು ಇರಬಹುದೆಂಬುದನ್ನು ತಾವೇ ಲೆಕ್ಕ ಹಾಕಿ ಹೇಳಿ. ಅಂದರೆ ಎಷ್ಟು ಕಾಳಜಿ ವಹಿಸಿ ಪ್ರತಿಯೊಂದು ವಿಚಾರಕ್ಕೂ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದವರು ಏಕೆ ಹೀಗಾದರು? ನೀವು ಹೀಗೆ ಆಗುತ್ತೀರಿ ಎಂದು ನಾನು ಅಂದುಕೊಂಡಿರಲಿಲ್ಲ. ಇದನ್ನು ಪ್ರಾಮಾಣಿಕವಾಗಿ ನಾನು ಹೇಳುತ್ತೇನೆ. ಅದೇನು ಹೀಗೆ ಆಗಿಬಿಟ್ಟಿರಿ ನೀವು?

ಅಧ್ಯಕರು: ಒಂದೇ ಒಂದು ಚಿಕ್ಕ ಅನೌನ್ಸ್‌ಮೆಂಟ್ ಇದೆ. ಅದನ್ನು ಓದುತ್ತೇನೆ.

ANNOUNCEMENT

MR. SPEAKER: I welcome Shir. H.S.Pandit, Chairman and Members of the Estimates Committee of Bihar Vidhana Sabha, who are witnessing the proceeding from the Speaker's Gallery.

SRI C. BYREGOWDA: My friend Mr. Kharge...

ಶ್ರೀ ವಾಟಾಳ್ ನಾಗರಾಜ್: ಏಕೆ, ಕನ್ನಡದಲ್ಲಿಯೇ ಹೇಳಿ...

ಅಧ್ಯಕ್ಷರು: ಅವರು ಹೊರ ರಾಜ್ಯದಿಂದ ಬಂದಿದ್ದಾರೆ, ನಮ್ಮ ಕಲಾಪಗಳನ್ನು ವೀಕ್ಷಣೆ ಮಾಡುತ್ತಿದ್ದಾರೆ. ಒಂದು ಕ್ಷಣ ಕಾಲ ಇಲ್ಲಿ ಏನು ನಡೆಯುತ್ತಿದೆ ಎನ್ನುವುದು ಅವರಿಗೂ ಗೊತ್ತಾಗಲಿ ಎನ್ನುವ ಕಾರಣಕ್ಕಾಗಿ ಇಂಗ್ಲೀಷ್‌ನಲ್ಲಿ ಹೇಳುತ್ತಾರೆ. ಅವರಿಗೆ ಹಿಂದಿ ಬರುವ ಹಾಗಿದ್ದರೆ, ಹಿಂದಿಯಲ್ಲಿ ಹೇಳಿ ಎಂದು ಹೇಳಬಹುದಿತ್ತು. ಅವರಿಗೆ ಹಿಂದಿ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಯಾರೋ ಬಂದಿದ್ದಾರೆ, ಅವರಿಗೆ ಗೊತ್ತಾಗಲಿ ಎಂದು ಇಂಗ್ಲೀಷ್, ಹಿಂದಿಯಲ್ಲಿ ಮಾತನಾಡುವುದು ಮತ್ತು ನಮ್ಮ ಭಾಷೆ ಬದಲಾವಣೆಯಾಗುವುದು ಬೇಡ. ನಾನು ಹೇಳುತ್ತೇನೆ, ನಮ್ಮ ಸದನಕ್ಕೆ, ನಮ್ಮ ರಾಜ್ಯಕ್ಕೆ

ಗೊತ್ತಾದರೆ ಸಾಕು. ಈಗ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಪಶ್ಚಿಮ ಬಂಗಾಳದಲ್ಲಿ ವಿಯೆಟ್ನಾಮ್ ಸಮ್ಮೇಳನವಾಯಿತು. ದೇಶ ವಿದೇಶಗಳಿಂದ ಎಲ್ಲಾ ಬಂದಿದ್ದರು. ಪಶ್ಚಿಮ ಬಂಗಾಳದ ಮುಖ್ಯಮಂತ್ರಿಗಳು ಬಂಗಾಳಿ ಭಾಷೆಯಲ್ಲಿಯೇ ಮಾತನಾಡುತ್ತಿದ್ದರು.

ಅಧ್ಯಕ್ಷರು: ವಿಯೆಟ್ನಾಮ್ ಭಾಷೆ ಬರದೇ ಹೋದರೆ, ಇನ್ನೇನು ಮಾಡುತ್ತಾರೆ? ಪಶ್ಚಿಮ ಬಂಗಾಳದ ಭಾಷೆಯಲ್ಲಿಯೇ ಮಾತನಾಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ಆ ತರಹ ಬದಲಾವಣೆ ಏನಲ್ಲ. ತಮಗೆ ಸೇರಿದ್ದು, ತಮ್ಮ ತೀರ್ಪು.

ಅಧ್ಯಕ್ಷರು: ಆಯಿತು. ಬೇರೆ ಯಾರಿಗೂ ನಮ್ಮ ವಿಚಾರ ಗೊತ್ತಾಗುವುದು ಬೇಡ, ಕನ್ನಡದಲ್ಲಿಯೇ ಹೇಳಿ.

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಸ್ನೇಹಿತರಾದಂಥ ಖರ್ಗೆಯವರು ನನ್ನನ್ನು ಔಟ್ ಆಫ್ ಕಾಂಟೆಸ್ಟ್ ಕೋಟ್ ಮಾಡುತ್ತಿದ್ದಾರೆ. ವಿಧಾನ ಸೌಧದ ಮುಂದೆ ಆಲೂಗಡ್ಡೆ, ತರಕಾರಿ ನಾನು ತಂದು ಎಸೆದಿರುವಂತಾದ್ದು ನಿಜ. ಏಕೆಂದರೆ, ಅವತ್ತು ಇಡೀ ದೇಶಾದ್ಯಂತ ಲಾರಿ ಮುಷ್ಕರ ಇತ್ತು. ಲಾರಿ ಮುಷ್ಕರ ಇದ್ದುದ್ದರಿಂದ, ರೈತರು ಬೆಳೆದಂಥ ಹಣ್ಣು, ತರಕಾರಿ ಮತ್ತೊಂದು ಏನಿದೆ, ಅದು ಎಲ್ಲಿಗೂ ಸಾಗಾಣಿಕೆಯಾಗಿರಲಿಲ್ಲ. ಅದೆಲ್ಲವೂ ತೋಟದಲ್ಲಿಯೇ ಕೊಳೆಯುತ್ತಾ ಇತ್ತು. ಆ ಮುಷ್ಕರವನ್ನು ಆದಷ್ಟು ಜಾಗ್ರತೆ ಬಗೆಹರಿಸಬೇಕೆನ್ನುವಂತಾದ್ದು, ಸರ್ಕಾರದ ಮೇಲೆ ಒತ್ತಾಯ ತರುವುದಕ್ಕೆ ಅವತ್ತಿನ ದಿವಸ ಮಾಡಿರತಕ್ಕ ಕೆಲಸ. ಮಾನ್ಯ ಸ್ನೇಹಿತರಾದಂಥ ವಾಟಾಳ್ ನಾಗರಾಜ್‌ರವರು ಹೇಳುತ್ತಿದ್ದಾರೆ. ಮಂತ್ರಿಯಾದ ಮೇಲೆ ಈ ಭೈರೇಗೌಡ ಬೇರೆ, ಆ ಭೈರೇಗೌಡ ಅಲ್ಲ ಎಂದು. ಅಲ್ಲಿ ಕುಳಿತಿದ್ದ ಭೈರೇಗೌಡನೇ, ಈ ಭೈರೇಗೌಡನೂ.

ಶ್ರೀ ವಾಟಾಳ್ ನಾಗರಾಜ್: ನಾನು ಬೇಕಾದರೆ ಅದನ್ನು ಸಮರ್ಥನೆ ಮಾಡುತ್ತೇನೆ. ನೀವು ಆ ಭೈರೇಗೌಡರು ಅಲ್ಲ. ಅಧ್ಯಕ್ಷರು ನನಗೆ ಅವಕಾಶ ಕೊಡಲಿ, 10 ನಿಮಿಷದಲ್ಲಿ ನಿಮ್ಮ ಚಿತ್ರವನ್ನೇ ಇಲ್ಲಿ ಇಡುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಅವರು ಏನು ಹೇಳುತ್ತಿದ್ದಾರೆಂದರೆ, ನೀವು ಇಲ್ಲಿದ್ದಾಗ ಹುಲಿಯಾಗಿದ್ದಿರಿ, ಅಲ್ಲಿಗೆ ಹೋದಮೇಲೆ ಇಲಿಯಾಗಿದ್ದೀರಿ ಎಂದು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್: ಅವರು ಅಬಕಾರಿ ಇಲಾಖೆಯ ಬಗ್ಗೆ ಎಷ್ಟು ಸುದೀರ್ಘವಾದ ಭಾಷಣ ಮಾಡುತ್ತಿದ್ದರು. ಇವತ್ತು ಏಕೆ ಈ ರೀತಿ